**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಮಾಗಡಿ**

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 6022 / 2022

**ಚಾಸಾ ಃ- 05 / ಪ್ರಾಸಾ ಃ- 04**

| | |
|---|---|
| ಹೆಸರು | ಪುನೀತ್ ಸಿ |
| ತಂದೆ ಹೆಸರು | ಚನ್ನಬಸವಯ್ಯ |
| ವಯಸ್ಸು | 24 |
| ಉದ್ಯೋಗ | ಅಡುಗೆ ಕೆಲಸ |
| ವಿಳಾಸ | ಉಡುವೆಗೆರೆ |

**ದಿನಾಂಕಃ 27.03.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 1 ರಿಂದ 4 ರವರು ಪರಿಚಯ ಇರುತ್ತಾರೆ. ಈಗ ಸಾಕ್ಷಿಗೆ ಕೃತ್ಯ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಕೆ ಎ 42/ಎಫ್ 0227 ಕೆ ಎಸ್ ಆರ್ ಟಿ ಸಿ ಬಸ್ ನಮ್ಮ ಊರಿನಲ್ಲಿ ಎ.ಕೆ.ದೊಡ್ಡಿ ಕಡೆಯಿಂದ ಬರುತ್ತಿತ್ತು, ಅಲ್ಲಿ ತೊಟ್ಟಿಗೆ ಗುದ್ದಿರುತ್ತಾರೆ. ಆ ಸಂಬಂಧ ಪೋಲಿಸರು ನಮ್ಮೂರಿಗೆ ದಿನಾಂಕ 05.08.2022 ರಂದು ಮಹಜರ್ ಗೆ ಮಧ್ಯಾಹ್ನ 2.00 ಗಂಟೆಗೆ ಬಂದಿದ್ದರು, ಆ ಸಮಯದಲ್ಲಿ ನಾನು ಮತ್ತು ಚಾಸಾ4 ರವರು ಹಾಜರು ಇದ್ದೆವು. ಆ ಸಮಯದಲ್ಲಿ ನಮ್ಮ ಸಹಿಯನ್ನು ಹಾಕಿಸಿಕೊಂಡಿರುತ್ತಾರೆ. ಸದರಿ ಮಹಜರ್ ಸಮಯದಲ್ಲಿ ಪೋಲಿಸರು ಬಸ್ಸನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಬಸ್ಸನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿ ಇರುವ ಬಸ್ಸನ್ನು ನೋಡಿ ಗುರುತಿಸಿದ್ದು ಪೋಟೋಗಳನ್ನು ಕ್ರಮವಾಗಿ ನಿಪಿ-03 ಮತ್ತು ನಿಪಿ-04 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮಹಜರ್ ಸಮಯದಲ್ಲಿ ತೆಗೆದ ಪೋಟೋವನ್ನು

ತೋರಿಸಲಾಗಿ ನೋಡಿ ಗುರುತಿಸಿ ಅದರಲ್ಲಿ ತಮ್ಮ ಇರುವಿಕೆಯನ್ನು ಸಹ ಗುರುತಿಸಿದ್ದು ಸದರಿ ಫೋಟೋವನ್ನು ನಿಪಿ-05 ಎಂದು ಗುರುತಿಸಲಾಯಿತು.

**ಪಾಟೀ ಸವಾಲು** ಃ- **ಶ್ರೀ. ಎನ್ ಆರ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಪೋಲಿಸರು ಬರೆದುಕೊಂಡಿರುವುದಕ್ಕೆ ನೀವು ಸಹಿ ಹಾಕಿರುತ್ತೀರಿ ಎಂದರೆಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕೃತ್ಯ ನಡೆದ ಸ್ಥಳದಲ್ಲಿ ನೀವು ಇದ್ದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರನ್ನು ಪೋಲಿಸರಗೆ ಬರೆದುಕೊಂಡಿರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮಹಜರ್ ನಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿರುವುದಿಲ್ಲ ನೀವು ಸಹಿ ಮಾತ್ರ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಸಹಿ ಹಾಕಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಮಹಜರ್ ಗೆ ಹಾಜರಾಗಲು ಪೋಲಿಸರು ನೋಟಿಸ್ ಕೊಟ್ಟಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**